**ಸಿವಿಲ್ ಜಡ್ಜ್ ಹಾಗೂ ಹೆ. ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಅಸಲು ದಾವಾ ಸಂಖ್ಯೆ ::157/2018**

| | | |
|---|---|---|
| **ಸಾಕ್ಷಿದಾರರ ಹೆಸರು** | : ನಾಗಲಾಂಭಿಕ | **PW**-2 |
| **ಗಂಡನ ಹೆಸರು** | : ಸಿದ್ದಲಿಂಗಯ್ಯ | |
| **ವಯಸ್ಸು** | : 42 ವರ್ಷ | |
| **ಉದ್ಯೋಗ** | : ಸರ್ವೆಯರ್ | |
| **ವಾಸಸ್ಥಳ** | : ತುಮಕೂರು | |

**ದಿನಾಂಕಃ25-02-25 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ವಾದಿ ಪರ ಶ್ರೀ. KLR ವಕೀಲರಿಂದ ::**

ನಾನು 2014 ರಿಂದ 2020 ರವರೆಗೆ ತರೀಕೆರೆಯ ADLR ಕಚೇರಿಯಲ್ಲಿ ಭೂಮಾಪಕಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಹೀರೆಕಾತೂರು ಗ್ರಾಮದ ಸರ್ವೇ ನಂಬರ್ 103/3 ರಲ್ಲಿ 23 ½ ಗುಂಟೆ ಜಮೀನನ್ನು ಅದರ ಮಾಲೀಕರು ಹದ್ದುಡಬಸ್ತು ಮಾಡಿಕೊಡುವಂತೆ ನಮ್ಮ ಕಚೇರಿಗೆ ಅರ್ಜಿ ಸಲ್ಲಿಸಿದ ಮೇರೆಗೆ ನಮ್ಮ ಕಚೇರಿಯಿಂದ ನನ್ನನ್ನು ಸದರಿ ಕೆಲಸವನ್ನು ನಿರ್ವಹಿಸಲು ನೇಮಕ ಮಾಡಿದ್ದು ಅದರಂತೆ ನಾನು ವಾದಿ ನಾಗಪ್ಪ ಹಾಗೂ ಸದರಿ ಜಮೀನಿನ ಸುತ್ತಮುತ್ತಲಿನ ಮಾಲೀಕರಾದ ಮಲ್ಲೇಶಪ್ಪ, ಕಲ್ಯಾಣಪ್ಪ, ರಮೇಶಪ್ಪ ಹಾಗೂ ಆಂಜನೆಯ ಎನ್ನುವವರಿಗೆ ನೋಟೀಸ್ ಅನ್ನು ಜಾರಿ ಮಾಡಿ ದಿಃ 28.01.2017 ರಂದು ಸದರಿ ಜಮೀನಿನ ಸರ್ವೇ ಕಾರ್ಯವನ್ನು ನಿರ್ವಹಿಸಿ ಸ್ದಳದಲ್ಲಿ ಹೇಳಿಕೆಯನ್ನು ದಾಖಲಿಸಿ ನಕ್ಷೆಯನ್ನು ತಯಾರಿಸಿರುತ್ತೇನೆ. ಸಾಕ್ಷಿಯು ನಿಪಿ12 ರಿಂದ 14 ದಾಖಲೆಗಳಲ್ಲಿ ಇರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ಕ್ರಮವಾಗಿ ನಿಪಿ12 ಎ, 13 ಎ ಮತ್ತು 14 ಎ ಎಂದು ಗುರುತಿಸಲಾಯಿತು.

ಸದರಿ ಸಮಯದಲ್ಲಿ ಪಕ್ಕದ ಜಮೀನು ಅಂದರೆ ಸರ್ವೇ ನಂಬರ್ 103/4 ರ ಮಾಲೀಕರಾದ ಮಲ್ಲೇಶಪ್ಪ ರವರ ಮಗ ಪ್ರಕಾಶ್ ಎನ್ನುವವರು ಸಹ ಹಾಜರಿದ್ದು ಅವರು ನಾನು ತಯಾರಿಸಿದ ಹೇಳಿಕೆಗೆ ಸಹಿ ಹಾಕಲು ನಿರಾಕರಿಸಿರುತ್ತಾರೆ.

ನನ್ನ ಸರ್ವೇಯ ಪ್ರಕಾರ ಸರ್ವೇ ನಂಬರ್ 103/3 ರಲ್ಲಿನ 23 ½ ಗುಂಟೆ ಜಮೀನಿನ ಪೈಕಿ ಪೂರ್ವ ದಿಕ್ಕಿನಲ್ಲಿ ಅದರ ಪಕ್ಕದ ಜಮೀನು ಅಂದರೆ ಸರ್ವೇ ನಂಬರ್ 103/4 ರ ಮಾಲೀಕರು ಅದನ್ನು 3 ½ ಗುಂಟೆ ಅಷ್ಟು ಜಾಗವನ್ನು ಒತ್ತುವರಿ ಮಾಡಿರುವುದು ಕಂಡು ಬರುತ್ತದೆ ಮತ್ತು ಸದರಿ ಒತ್ತುವರಿ ಪ್ರದೇಶವನ್ನು ಹದ್ದುಬಸ್ತು ನಕ್ಷೆಯಲ್ಲಿ ನಾನು ತೋರಿಸಿರುತ್ತೇನೆ.

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. BPR ವಕೀಲರಿಂದ ::**

ನನಗೆ ಭೂಮಾಪಕಳಾಗಿ 14 ವರ್ಷದ ಅನುಭವ ಇರುತ್ತದೆ. ಸಾಮಾನ್ಯವಾಗಿ ಯಾವುದಾದರು ಸರ್ವೇ ಮಾಡುವ ಪೂರ್ವದಲ್ಲಿ ನೋಟೀಸ್ ಅನ್ನು ಜಾರಿ ಮಾಡುವ ಸಮಯದಲ್ಲಿನಮ್ಮ ಕಚೇರಿಯ ಗುಮಾಸ್ತರ ಮುಖಾಂತರ ಸಂಬಂಧಪಟ್ಟ ವ್ಯಕ್ತಿಗೆ ನೋಟೀಸ್ ಅನ್ನು ಖುದ್ದಾಗಿ ಜಾರಿ ಮಾಡಿಸುತ್ತೇವೆ. ನೋಂದಾಯಿತ ಅಂಚೆ ಮುಖಾಂತರ ಸಹ ನಮ್ಮ ಕಚೇರಿಯಿಂದ ನೋಟೀಸ್ ಜಾರಿ ಮಾಡುವ ಅವಕಾಶ ಇರುತ್ತದೆ. ಸಾಕ್ಷಿಗೆ ಒಂದು ಹದ್ದುಬಸ್ತು ನ ಅರ್ಜಿಯನ್ನು ತೋರಿಸಲಾಗಿ ಅದನ್ನು ಸಾಕ್ಷಿಯು ವಾದಿಗೆ ಸಲ್ಲಿಸಿದ ಅರ್ಜಿ ಎಂದು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ಅರ್ಜಿಯಲ್ಲಿ ಸರ್ವೇ ಮಾಡಲು ಕೋರಿರುವ ಜಮೀನಿನ ಚಕ್ಕುಬಂದಿ ಕಂಡು ಬರುವುದಿಲ್ಲ ಎಂದರೆ ಸರಿ. ಹೀರೆಕಾತೂರು ಗ್ರಾಮದ ಸರ್ವೇ ನಂಬರ್ 103 ರ ಒಟ್ಟು ವಿಸ್ತೀರ್ಣ ಎಷ್ಟು ಇರುತ್ತದೆ ಎಂದು ನನಗೆ ಈಗ ಗೊತ್ತಿಲ್ಲ, ಆದರೆ ಆಕಾರ್ ಬಂದ್ ಪರಿಶೀಲನೆ ಮಾಡಿದಾಗ ತಿಳಿದು ಬರುತ್ತದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾಡಿರುವ ಸರ್ವೇ ಸಮಯದಲ್ಲಿ ನಾನು ಆಕಾರ್ ಬಂದ್ ನ ಪ್ರತಿಯನ್ನು ತೆಗೆದುಕೊಂಡು ಹೋಗಿರುತ್ತೇನೆ. ಸದರಿ ವಿಚಾರವನ್ನು ನಾನು ನನ್ನ ನಕ್ಷೆ ಅಥವಾ ವರದಿಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಿವಾದಿತ ಜಮೀನಿಗೆ ಸಂಬಂಧಪಟ್ಟಂತೆ ಮಾತ್ರ ನನ್ನ ಹೇಳಿಕೆಯಲ್ಲಿ ಮತ್ತು ನಕ್ಷೆಯಲ್ಲಿ ನಮೂದು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಹೀರೆಕಾತೂರು ಗ್ರಾಮದ ಸರ್ವೇ ನಂಬರ್ 103 ರ ಸಂಪೂರ್ಣ ವಿಸ್ತೀರ್ಣವನ್ನು ನಾನು ಅಳತೆ ಮಾಡಿರುತ್ತೇನೆ. ಹೀರೆಕಾತೂರು ಗ್ರಾಮದ ಸರ್ವೇ ನಂಬರ್ 103 ಒಟ್ಟು ಎಷ್ಟು ಹಿಸ್ಸೆಗಳಾಗಿರುತ್ತವೆ ಎಂದು ನನಗೆ ಈಗ ನೆನಪಿಲ್ಲ, ಅದನ್ನು ಪಹಣಿಗಳನ್ನು ನೋಡಿ ಹೇಳಬಹುದು. ಸರ್ವೇ ನಂಬರ್

103 ಯು ಸರ್ವೇ ನಂಬರ್ 103/1, 103/3 ಮತ್ತು 103/4 ರಂತೆ ಪೋಡಾಗಿರುತ್ತದೆ ಎಂದರೆ ಸರಿ. ಸರ್ವೇ ನಂಬರ್ 103 ರ ಒಟ್ಟು ವಿಸ್ತೀರ್ಣ 2 ಎಕರೆ 14 ಗುಂಟೆ ಆಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು. ಅದನ್ನು ಆಕಾರ್ ಬಂದ್ ನೋಡಿ ನಿಖರವಾಗಿ ಹೇಳಬಹುದು ಎಂದು ನುಡಿದಿರುತ್ತಾರೆ. ನಿಪಿ12 ನಕ್ಷೆಯಲ್ಲಿ ಸರ್ವೇ ನಂಬರ್ 103/3 ನ್ನು ಹೊರತುಪಡಿಸಿ ಇತರೇ ಯಾವುದೇ ಸುತ್ತಲಿನ ಜಮೀನುಗಳ ವಿಸ್ತೀರ್ಣ ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹದ್ದುಬಸ್ತು ಸ್ಕೆಚ್ ತಯಾರಿಸುವ ಸಮಯದಲ್ಲಿ ಕೇವಲ ವಿವಾದಿತ ಜಮೀನಿನ ಬಗ್ಗೆ ಮಾತ್ರ ನಮೂದು ಮಾಡಲಾಗುತ್ತದೆ ಎಂದು ನುಡಿದಿರುತ್ತಾರೆ. ಸರ್ವೇ ನಂಬರ್ 103 ರಲ್ಲಿ ಕೇವಲ 3 ಪೋಡುಗಳಿದ್ದು ಸಂಪೂರ್ಣ ಸರ್ವೇ ನಂಬರ್ ನ ಜಮೀನನ್ನು ನನ್ನ ನಕ್ಷೆಯಲ್ಲಿ ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಆ ರೀತಿ ಮಾಡಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಸರ್ವೇ ಸ್ಕೆಚ್ ನಲ್ಲಿ ಕುಣ ನಂಬರ್ ಖಾಲಿ ಆಗಿ ಬಿಟ್ಟಿರುತ್ತೇನೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ಸದರಿ ಸಮಯದಲ್ಲಿ ನನಗೆ ಮೂಲ ಕುಣಗಳು ಸಿಗದಿದ್ದ ಕಾರಣ ನಾನೇ 4 ದಿಕ್ಕುಗಳಲ್ಲಿ 4 ಗುಣ ನಂಬರ್ ಗಳನ್ನು ಅಳವಡಿಸಿ ಸರ್ವೇ ಕೆಲಸವನ್ನು ಮಾಡಿರುತ್ತೇನೆ. ಆ ರೀತಿ ಮೂಲ ಕುಣ ನಂಬರ್ ಸಿಗದಿದ್ದ ಪಕ್ಷದಲ್ಲಿ ಅಳತೆ ಕೆಲಸವನ್ನು ಮಾಡಲು ಸಾಧ್ಯ ಇಲ್ಲ ಎಂದರೆ ಸಾಕ್ಷಿಯು ನಮಗೆ ಸಿಕ್ಕ ಇತರೇ ಸರ್ವೇ ನಂಬರ್ ನ ಕುಣಗಳ ಆಧಾರದಲ್ಲಿ ಸರ್ವೇ ಕೆಲಸವನ್ನು ಮಾಡಬಹುದು ಎಂದು ನುಡಿದಿರುತ್ತಾರೆ. ಸದರಿ ವಿಚಾರವನ್ನು ನಿಪಿ 13 ಹೇಳಿಕೆಯಲ್ಲಿ ಬರೆದಿರುವುದಿಲ್ಲ ಕಾರಣ ಅದರ ಅವಶ್ಯಕತೆ ಇರುವುದಿಲ್ಲ. ನಾನು ಹೇಳುವಂತೆ ನಾನೇ ಕುಣ ನಂಬರ್ ಗಳನ್ನು ಅಳವಡಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ಪಕ್ಕದ ಸರ್ವೇ ನಂಬರ್ ಜಮೀನಿನ ಕುಣ ನಂಬರ್ ಗಳ ಆಧಾರದಲ್ಲಿ ಆ ರೀತಿ ಮಾಡಲು ನಮಗೆ ಅವಕಾಶ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಪ್ರಕರಣದ ಸರ್ವೇ ಸಂಬಂಧಪಟ್ಟಂತೆ ನಾನು ಆ ರೀತಿ ಪಕ್ಕದ ಸರ್ವೇ ನಂಬರ್ 108 ರಿಂದ ಸರ್ವೇ ಯನ್ನು ಪ್ರಾರಂಭಿಸಿರುತ್ತೇನೆ. ಸರ್ವೇ ನಂಬರ್ 108 ರಿಂದ ಸರ್ವೇ ನಂಬರ್ 103/3 ಗೆ ಎಷ್ಟು ಚೈನ್ ಗಳು ಆಗುತ್ತದೆ ಎಂದರೆ ಸಾಕ್ಷಿಯು ಅದನ್ನು ಟಿಪ್ಪಣಿ ಪುಸ್ತಕ ನೋಡಿ ಹೇಳಬೇಕಾಗುತ್ತದೆ ಎಂದು ನುಡಿದಿರುತ್ತಾರೆ. ನನ್ನ ಹದ್ದುಬಸ್ತು ನಕ್ಷೆಯಲ್ಲಿ ನಾನು ಸರ್ವೇ ನಂಬರ್ 103/1 ಮತ್ತು 103/4 ಗಳ ವಿಸ್ತೀರ್ಣ ವನ್ನು

ತೋರಿಸದಿರುವ ಕಾರಣ ಸರ್ವೇ ನಂಬರ್ 103/3 ರಲ್ಲಿ ಎಷ್ಟು ಒತ್ತುವರಿ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಸರ್ವೇ ನಂಬರ್ 103/3 ರಲ್ಲಿ ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ಸದರಿ ಅಡಿಕೆ ತೋಟಕ್ಕೆ ಸುಮಾರು 10-15 ವರ್ಷ ಹಳೆಯದಾಗಿರಬಹುದು. ಸರ್ವೇ ನಂಬರ್ 103 ರ ಸಂಪೂರ್ಣ ವಿಸ್ತೀರ್ಣದ ಜಾಗವೂ ಅಡಿಕೆ ತೋಟ ಆಗಿರುತ್ತದೆ ಎಂದರೆ ಸರಿ. ವಾದಿಗೆ ಅನುಕೂಲ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮಾಡಿರುವ ಹದ್ದು ಬಸ್ತು ನಕ್ಷೆ ನಮ್ಮ ಇಲಾಖಾ ನಿಯಮವಳಿಗಳ ಪ್ರಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಉದ್ದೇಶಪೂರ್ವವಾಗಿ ಮೂಲ ಕುಣ ಸಿಗದಿದ್ದ ಕಾರಣ ನಾನು ನನ್ನ ನಕ್ಷೆಯಲಿ ಸರ್ವೇ ನಂಬರ್ 103/1 ಹಾಗೂ 103/4 ಗಳ ವಿಸ್ತೀರ್ಣ ವನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: